6

# ಯೇಸುವಿನ ಅಧಿಕಾರ ಮತ್ತು "ನೂತನವಾದ ಪ್ರಕಟನೆ"

ಹಳೇ ಒಡಂಬಡಿಕೆಯು ನಮಗೆ ಅಧಿಕಾರವಲ್ಲ. ಅದು ಇಸ್ರಾಯೇಲ್ಯರಿಗೆ ಹೊರತಾಗಿ ಇತರರಿಗೆ ಆಗಿರುವದಿಲ್ಲ, ಅದು ಎಂದಿಗೂ ನಿರಂತರವಾದದ್ದಲ್ಲ. ಯೇಸುವಿನ ಹೊಸ ಒಡಂಬಡಿಕೆಯಿಂದ ಧರ್ಮಶಾಸ್ತ್ರವು ಇಲ್ಲದಾಯಿತು. ಎಂದು ಹೊಸ ಒಡಂಬಡಿಕೆ ಉಪದೇಶಿಸುತ್ತದೆ, ಆದದರಿಂದ ಅದು ಇನ್ನೆಂದಿಗೂ ನಮ್ಮ ಮೇಲೆ ಅಧಿಕಾರ ನಡೆಸದು.

ದೈವೀಕ ಅಧಿಕಾರದ ಕುರಿತು, ಇನ್ನೊಂದು ಪ್ರಶ್ನೆಯನ್ನು ಚರ್ಚಿಸೋಣ. ಹೊಸ ಒಡಂಬಡಿಕೆಯು ಬರೆಯಲ್ಪಟ್ಟಾಗ, ಕೆಲವರು ತಾವು ಪ್ರಕಟನೆಯನ್ನು ಹೊಂದಿದರು ಎಂದು ಹೇಳುವವರ ಕುರಿತಾಗಿ ಏನು? ಹೊಸ ಒಡಂಬಡಿಕೆಗೆ ಅಪೊಸ್ತಲರು ಮತ್ತು ಪ್ರವಾದಿಗಳಂತೆ, ತಾವು ಸಹ ಪ್ರಕಟನೆಗಳನ್ನು ಹೊಂದಿರುವೆವು ಎಂದು ಹೇಳುವವರ ಕುರಿತು ಏನು? ಕೆಲವರು ದೇವರು ಅವರನ್ನು ಈ ಕೆಲಸವನ್ನಾದರೂ, ಆ ಕೆಲಸವನ್ನಾದರೂ ಮಾಡು ಎಂದು ತಿಳಿಸಿರುತ್ತಾನೆ ಎಂದು ಹೇಳುವವರ ಬಗ್ಗೆ ಏನು. ಹೊಸ ಒಡಂಬಡಿಕೆಯ ಕೆಲವು ವಿಷಯಗಳನ್ನು ಅನುಭವಿಸುವುದಾಗಲಿ, "ಯೋಚಿಸುವುದಾಗಲಿ" ಅದರ ಕುರಿತು ದೇವರು ನೇರವಾದ ಪ್ರಕಟನೆಯನ್ನು ನೀಡಿದನು ಎಂದು ಹೇಳುವ ಜನರು ಇರುವರು. ಹೊಸ ಒಡಂಬಡಿಕೆಯಲ್ಲಿ ಯಾರಾದರು ಗೊಂದಲಕ್ಕೊಳಗಾದರೆ, ಅಂತವರು ಇನ್ನೂ ದೇವರ ಅಧಿಕಾರಕ್ಕೆ ಒಳಗಾಗಿರುವದಿಲ್ಲ; ಅಂತವರು ಆತನ ವಾಕ್ಯಕ್ಕೆ ತೀರ್ಪುಮಾಡುವವರಾಗಿದ್ದಾರೆ.

ಈ ನೂತನವಾದ "ಪ್ರಕಟನೆಗಳನ್ನು ನಾವು ಆಲೋಚಿಸುವ" ಅವಶ್ಯವಿರುವದಿಲ್ಲ ಅದು ಅವರ ವ್ಯಕ್ತಿಗತವಾದ ಸಂಗತಿ ಅದರಲ್ಲಿ ಅವರು ಹೆಚ್ಚಳಪಡುವವರಾಗಿದ್ದಾರೆ ಯಾಕೆಂದರೆ ಅವರೆಲ್ಲರಲ್ಲಿ ಒಂದೇ ಸಮಸ್ಯೆ ಇರುತ್ತದೆ. ಹೊಸ ಬೋಧನೆಯು, ಹೊಸ ಒಡಂಬಡಿಕೆ ಏನನ್ನಾದರು ಸೇರಿಸದಿದ್ದರೆ, ಅದರಲ್ಲಿ ಯಾವ ಕಾರಣವು ಇರಲಾರದು. ಹೊಸ ಒಡಂಬಡಿಕೆಯ ಪ್ರಕಾರ ಅವರ ಮಾತುಗಳು ಇಲ್ಲದೆ ಹೋದರೆ, ಅದು ತಪ್ಪು ಬೋಧನೆಯಾಗುತ್ತದೆ. ಒಂದು ವೇಳೆ ದೇವರು ತನ್ನೊಂದಿಗೆ ತಾನೆ ವ್ಯತಿರಿಕ್ತವಾದ ಕಾರ್ಯವನ್ನು ಮಾಡುವುದಾದರೆ, ಆತನ ಸ್ವಭಾವದ ಬಗ್ಗೆ ಏನು? ಆತನು ತಾರತಮ್ಯ ಮಾಡುವವನೆ ಅಪೊಸ್ತಲರಕೃತ್ಯಗಳು 10:34, 35? ನಮ್ಮ ಜೀವಿತದ ಬಗ್ಗೆ ದೇವರು ವ್ಯತಿರಿಕ್ತವಾದ ಸಲಹೆ ಸೂಚನೆಗಳನ್ನು ನೀಡುವುದಾದರೆ, ಆತನು ಗೊಂದಲವನ್ನು ಸೃಷ್ಟಿಸುವನಲ್ಲವೇ, 1 ಕೊರಿಂಥ 14:33ರಂತೆ ಅಲ್ಲವೇ? ಒಂದು ವೇಳೆ ನೂತನ ಪ್ರಕಟನೆಯು ಕ್ರಮಬದ್ಧವಾದರೆ, ನಾವು ಹೊಸ ಒಡಂಬಡಿಕೆಯನ್ನು ನಂಬಬಹುದೇ? ಗ್ರಂಥಗಳು ದೇವ ಪ್ರಕಟಿತವಾದ, ಯೇಸುವಿನ ಉಪದೇಶಗಳಾಗಿದ್ದು ಅದನ್ನು ಎಲ್ಲಾ ಜನರ ಎಲ್ಲಾ ಕಡೆಗಳಲ್ಲಿಯೂ ನಿತ್ಯತ್ವಕ್ಕಾಗಿ ನಂಬಲು ಸಾಧ್ಯವೇ?

ಯೇಸುವಿನ, ಅಧಿಕಾರಯುಕ್ತ ಸಂದೇಶವೂ, ಆತನ ಅಧಿಕೃತ ಅನುಯಾಯಿಗಳ ಮೂಲಕ ಪ್ರಕಟಗೊಂಡು, ಎಲ್ಲಾ ಸಮಯಕ್ಕೂ ದಾಖಲೆಯಾಗಿರುತ್ತದೆ. ಯೇಸುವಿನ ಅಧಿಕಾರವು ಪೂರ್ಣವಾಗಿದ್ದು ಮತ್ತು ಹೊಸ ಒಡಂಬಡಿಕೆಯಲ್ಲಿ ನಿತ್ಯವಾಗಿರುವುದಾದರೆ, ನಂತರ ಬರುವ ಎಲ್ಲಾ ಪ್ರಕಟಗಳು ಅನಗತ್ಯವಾಗಿವೆ.

## ದೃಢ ಪಟ್ಟಂತ ಸಂದೇಶ

ಹೊಸ ಒಡಂಬಡಿಕೆಯು ಮಾತ್ರ ದೇವರ ಮಾತುಗಳಾಗಿವೆ. ಪೌಲನು ಇದನ್ನು 2 ತಿಮೊಥೆ 3:16, 17ರಲ್ಲಿ, "ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣ ನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು."[1]

ಕೆಲವು ಸ್ಥಳಗಳಲ್ಲಿರುವ, ಪೌಲನು ಸಹ, ದೇವರಿಂದ ಪ್ರಕಟನೆಗಳನ್ನು ಸ್ವೀಕರಿಸಿದನೆಂದು ತಿಳಿಸಿರುವನು ಮತ್ತು ಆದುದರಿಂದ ಅವನ ಬೋಧನೆಗಳು ಪ್ರೇರಿತವಾದವು ಮತ್ತು ಅಧಿಕಾರಯುಕ್ತ ಎಂದು ತಿಳಿಸಿರುವನು ಅವನು, "... ನಾನು ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪನೆಯಲ್ಲವೆಂದು ನಿಮಗೆ ತಿಳಿಯಪಡಿಸುತ್ತೇನೆ. ನಾನು ಅದನ್ನು ಮನುಷ್ಯನಿಂದ ಹೊಂದಲಿಲ್ಲ, ನನಗೆ ಯಾರೂ ಉಪದೇಶಿಸಲಿಲ್ಲ. ಯೇಸು ಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು" (ಗಲಾತ್ಯ 1:11, 12). ಅದು ಯಾವ ರೀತಿಯಲ್ಲಿ ಜರುಗಿತು ಎಂದು ತಿಳಿಸಿದ್ದಾನೆ: "ದೇವರು ಅದನ್ನು ಆತ್ಮದ ಮೂಲಕ ತಿಳಿಯಪಡಿಸಿದನು" (1 ಕೊರಿಂಥ 2:10ಎ). ಕೆಲವು ವಚನಗಳ ನಂತರ, ಅದನ್ನು ವಿಸ್ತರಣೆ ಮಾಡಿ, ಅದಕ್ಕೆ ಪ್ರತಿಕ್ರಿಯೆ ಏನು ಎಂದು ತಿಳಿಸಿದನು:

> ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತ ವಾದ ರೀತಿಯಲ್ಲಿ ವಿವರಿಸುತ್ತೇವೆ (1 ಕೊರಿಂಥ 2:12, 13).

ಥೆಸಲೋನಿಕೆಯವರು ಈ ಬೋಧನೆಯನ್ನು ಒಪ್ಪಿಕೊಂಡಿರುವದಕ್ಕೆ ಕೃತಜ್ಞನಾದನು ಯಾಕೆಂದರೆ ಅದನ್ನು "ದೇವರ ವಾಕ್ಯವೆಂದು ತಿಳಿದು ಸ್ವೀಕರಿಸಿದ್ದರು" (1 ಥೆಸಲೋನಿಕ 2:13). ಎಫೆಸ 3:3-5, ಈ ಪ್ರಕಟಣೆಯನ್ನು ಪುನಃ ತಿಳಿಸಿದ್ದಾನೆ. ಇದುವರೆಗೆ ಗುಪ್ತವಾ ಗಿದ್ದ ಒಂದು ಸಂಗತಿ ದೈವ ಪ್ರಕಟನೆಯಿಂದ ನನಗೆ ತಿಳಿಸಲ್ಪಟ್ಟಿತೆಂಬದನ್ನು ನೀವು ಕೇಳಿ ದ್ದೀರಲ್ಲಾ. "ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ" (ವಚನ 4). ಬರೆದ ದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ "ಪರಿಶುದ್ಧ ಅಪೋಸ್ತಲರಿಗೂ ಪ್ರವಾದಿಗಳಿಗೂ ಪರಿಶುದ್ಧಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ" (ವಚನ 5).

ಹೊಸ ಒಡಂಬಡಿಕೆಯ ಬರಹಗಾರರ ಉಪದೇಶವು ದೇವರಿಂದಲೇ ಪಡೆದದ್ದು ಎಂದು ಸಾಭೀತುಪಡಿಸಿದರು. ಹೇಗೂ ಯಾರಾದರೂ ಸಹ ಈ ರೀತಿಯಾದ ಧೈರ್ಯದ ಹೇಳಿಕೆಯನ್ನು ನೀಡಬಹುದು. ಅನೇಕ ಸಾರಿ ಇಂತಹ ಹೇಳಿಕೆಗಳನ್ನು ಹೇಳಲಾಗಿದ್ದರು ಅದು ತಪ್ಪಾದದ್ದೆ. ಎಂದು ಗೋಚರವಾಗಿದೆ. ಹೊಸ ಒಡಂಬಡಿಕೆಯು ಅಧಿಕೃತ ವಾದದ್ದೆ? ಅದನ್ನು ನಾವು ಒಪ್ಪಬಹುದೇ? ಇದು ಒಳ್ಳೆಯ ಪ್ರಶ್ನೆಯೇ - ಆದುದರಿಂದ ಬೈಬಲಿನ ಒಂದು ಪತ್ರವು ಇಬ್ರಿಯ 2:1-4 ಅವರಿಗೆ ಉತ್ತರವನ್ನು ನೀಡುತ್ತದೆ:

> ಆದದರಿಂದ ನಾವು ಕೇಳಿದ ಸಂಗತಿಗಳಿಗೆ ತಪ್ಪಿ ಹೋದೇವೆಂದು ಭಯಪಟ್ಟು ಅವುಗಳಿಗೆ ಹೆಚ್ಚಾಗಿ ಲಕ್ಷ್ಯ ಕೊಡುವವರಾಗಿರಬೇಕು. ಯಾಕಂದರೆ ದೇವ ದೂತರ ಮೂಲಕ ಹೇಳಲ್ಪಟ್ಟ ವಾಕ್ಯವು ಸ್ಥಿರವಾಗಿದ್ದು ಅದನ್ನು ಮೀರಿ ಮಾಡಿದ ಪ್ರತಿಯೊಂದು ತಪ್ಪಿಗೂ ಅವಿಧೇಯತ್ವಕ್ಕೂ ನ್ಯಾಯವಾದ ಪ್ರತಿಫಲವುಂಟಾದ ಮೇಲೆ (ನಮ್ಮ ಮುಂದಿಟ್ಟಿರುವ) ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿ ಕೊಳ್ಳುವುದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿ

ದವರು ಇದನ್ನು ನಮಗೆ ಸ್ಥಿರಪಡಿಸಿದರು; ಮತ್ತು ದೇವರು ಅವರ ಕೈಯಿಂದ ಸೂಚಕ ಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿ ಕೊಡುತ್ತಿದ್ದನು.

ಇಬ್ರಿಯ ಬರಹಗಾರನು - 1 ಕೊರಿಂಥ 2:9-13ರಲ್ಲಿ - ಹೇಳಿದ ಮಾತನ್ನೆ ತಿಳಿಸಿರುವನು ಅವನ ಸಂದೇಶವು ದೇವರಿಂದಲೇ ಬಂದದ್ದು ಮತ್ತು ಪರಿಶುದ್ಧಾತ್ಮನಿಂದ ಅಧಿಕೃತವಾದದ್ದು ಎಂದು ತಿಳಿಸಿರುವನು. ಆ ವಾಕ್ಯವು ಯಾವ ರೀತಿಯಲ್ಲಿ ಅಧಿಕೃತ ವಾಗಿತ್ತು ಎಂದು ತಿಳಿಸಿ, "ದೇವರು ಅವರ ಕೈಯಿಂದ" ಸೂಚಕ ಕಾರ್ಯಗಳನ್ನು ಅದ್ಭುತ ಕಾರ್ಯಗಳನ್ನು ನಾನಾ ವಿಧವಾದ ಮಹತ್ಕಾರ್ಯಗಳನ್ನು ನಡಿಸಿ ಪರಿಶುದ್ಧಾತ್ಮ ವರಗಳನ್ನು ತನ್ನ ಚಿತ್ತಾನುಸಾರವಾಗಿ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು (ಇಬ್ರಿಯ 2:4; ASV).[2] ಇನ್ನೊಂದು ಪದದಲ್ಲಿ ದೇವರು ಅವರ ಬೋಧನೆಗಳೊಂದಿಗೆ ಇದ್ದದ್ದರಿಂದ ಮಹತ್ಕಾರ್ಯಗಳು ಉಂಟಾಗುತ್ತಿತ್ತು. ಅದನ್ನು ಮಾಡಲು ಸತ್ಯವಾಗಿರು ದೇವರಿಂದ ಅನುಬೋಧನೆ ಗೊಂಡ ಜನರು, ಈ ಮಹತ್ಕಾರ್ಯಗಳ ಮೂಲಕ, ಅವರು ದೇವರಿಂದ[3] ಅಧಿಕೃತವಾದ ವರು ಎಂದು ಸಾಬೀತಾಯಿತು. ಉಪದೇಶಕನು ಯೋಗ್ಯನಾಗಿದ್ದರೆ, ಅವನ ಬೋಧನೆಗಳು ಯೋಗ್ಯವಾಗಿರುತ್ತೆ, ಅದು ಒಂದು ವೇಳೆ ಬಾಯಿ ಮಾತಿನಿಂದ ಅಥವಾ ಲಿಖಿತವಾಗಿ ಹೇಳಿ ದ್ದರು. ಅದು ದೇವರ ವಾಕ್ಯದಿಂದ ಅಧಿಕಾರಯುಕ್ತವಾದದ್ದು ಎಂದು ಒಪ್ಪಬಹುದು.

ಬರವಣಿಗೆಯಲ್ಲಿರುವ ವಾಕ್ಯವು ಸ್ತುತಿ ಸ್ತೋತ್ರಕ್ಕೆ ಮೂಲವಾಗಿದೆ. ಬರವಣಿಗೆಯು ಬೋಧನೆಗೆ ಅನುಕೂಲವಾಗಿರುತ್ತದೆ. ಮನುಷ್ಯ ಸಂಬಂಧದಲ್ಲಿ ಬರವಣಿಗೆಯ ದಾಖಲೆಗಳನ್ನು ಉಪಯೋಗಿಸವ ಕುರಿತು ಯೋಚಿಸಿ. ಕೆಲವು ಸಂಗತಿಗಳನ್ನು ಮುದ್ರಿಸಿ ಕರಾರು ಮಾಡಲು "ಅದನ್ನು ಬರವಣಿಗೆಯಲ್ಲಿ ಮಾಡುತ್ತೇವೆ." ಮತ್ತು ಪುನಃ ಪುನಃ ನಮ್ಮ ದಾಖಲೆಗಳನ್ನು ಓದಲು ಬರವಣಿಗೆಯು ಸಹಾಯಿಸುತ್ತದೆ. ನಮಗೆ ಸ್ಪಷ್ಟತೆಯ ಅವಶ್ಯವಿರುವಾಗ ಅದನ್ನು ಪುನಃ ಓದುತ್ತೇವೆ. ದೇವರು ಒಪ್ಪದೆ ಇರುವ ವಿಷಯಗಳನ್ನು ತಿಳುಕೊಳ್ಳಲು ಬರವಣಿಗೆಯು ಸಹಾಯ ಮಾಡುತ್ತದೆ, ನಮ್ಮ ನಂಬಿಕೆಯನ್ನು ದೇವರ ವಾಕ್ಯಕ್ಕನುಗುಣವಾಗಿ ಅಭಿವೃದ್ಧಿ ಪಡಿಸಲು, ಸಹಾಯಿಸುತ್ತದೆ.

## ನಿರಂತರವಾದ ಕಟ್ಟುಪಾಡಿನ ಸಂದೇಶ

ಹೊಸ ಒಡಂಬಡಿಕೆಯನ್ನು ಬರವಣಿಗೆಯ ಆಕಾರಕ್ಕೆ ತಂದ ಕ್ರೈಸ್ತರು, ಅದು ಮಾನವನಿಗೆ ಶಾಶ್ವತವಾದ ಪ್ರಕಟನೆಯೆಂದು ಮನವರಿಕೆ ಮಾಡಿಕೊಂಡಿದ್ದರು. ಅದರ ಬರವಣಿಗೆಯನ್ನು ಅಭ್ಯಾಸಮಾಡಿ ಅದನ್ನು ಅನುಸರಿಸಬೇಕೆಂದು, ಮತ್ತು ಅದು ನಂಬಿಕೆಗೆ ಮೂಲ ವೆಂದು ಕ್ರಿಸ್ತನ ಮೊದಲ ಶತಮಾನದಲ್ಲಿಯೇ ಬೋಧಿಸಿ, ಕರ್ತನು ಬರುವವರೆಗೆ ಅದನ್ನು ಅನುಸರಿಸಬೇಕೆಂದು ತಿಳಿಸಿದರು.

ದೇವರನ್ನು ಮೆಚ್ಚಿಸುವುದಕ್ಕಾಗಿ ಅಗತ್ಯವಿರುವ ಸಕಲ ವಾಕ್ಯಗಳನ್ನು ದೇವರು ಗ್ರಂಥಗಳಲ್ಲಿ ನಿರಂತರವಾಗಿ ತಿಳಿಸಿರುವನೆಂದು ಪೇತ್ರನು ತಿಳಿಸಿದನು (2 ಪೇತ್ರ 1:3, 4). ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವು ದೊರೆ ಯಿತೆಂದು ಬಲ್ಲೆವಷ್ಟೆ. ಇದನ್ನು ತಿಳಿದವರಾದ ನಾವು "ದೇವರ ದೈವತ್ವದಲ್ಲಿ ಪಾಲುಗಾರ ರಾಗಿದ್ದೇವೆ" (ವಚನ 3). ಯಾಕೆಂದರೆ ನಾವು "ಲೋಕ ದಲ್ಲಿನ ದುರಾಶೆಯಿಂದುಟಾಗುವ ಕೆಟ್ಟತನದಿಂದ ತಪ್ಪಿಸಿಕೊಂಡಿದ್ದೇವೆ" (ವಚನ 4). ನಮಗೆ ಅವಶ್ಯವಿರುವದೆಲ್ಲವನ್ನು, ಪೇತ್ರನು ಬರೆದ ಸಮಯದಲ್ಲಿಯೇ ದೇವರು ನೀಡಿದ್ದಾನೆ. ಅದನ್ನು ಕ್ರಿ.ಶ. ಮೊದಲನೆಯ

ಶತಮಾನದಲ್ಲಿಯೇ ನೀಡಿರುವನು

ಯೂದನ ಓದುಗರು ಈಗಾಗಲೇ ಹೊಂದಿದ್ದ "ರಕ್ಷಣೆಯ" ಕುರಿತಾಗಿ ಬರೆದನು. ಅದು ಸಾಮಾನ್ಯವಾದದ್ದಾಗಿತ್ತು. ಅದು ಕ್ರಿಯೆ ಮತ್ತು ಯೇಸುವಿನ ಉಪದೇಶವಾಗಿತ್ತು (ವಚನ 17ನ್ನು ನೋಡಿ). ಅವರಿಗೆ *ಒಂದೇ ಸಾರಿ* ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ಅವರು ಹೋರಾಡಬೇಕೆಂದು ಎಚ್ಚರಿಸಿದನು (ವಚನ 3; ಒತ್ತಿ ಹೇಳಿದ್ದು ನನ್ನದು).[4]

ಕ್ರೈಸ್ತರು ಜೀವಿಸುವುದಕ್ಕೆ ಅಗತ್ಯವಿರುವ ಸಕಲ ವಾಕ್ಯಗಳು ಅವರಲ್ಲಿತ್ತು ಎಂದು ಹೊಸ ಒಡಂಬಡಿಕೆಯ ಬರಹಗಾರರು ನಂಬಿದ್ದರು. ಆದುದರಿಂದ ಶಿಷ್ಯರು ಆ ಉಪದೇಶಕ್ಕೆ ನಂಬಿಗಸ್ತರಾಗಿ ಇರಬೇಕೆಂದು ಎಚ್ಚರಿಸಿದರು. ಪೌಲನು ತಿಮೋಥಿಗೆ ಈ ರೀತಿಯಾಗಿ ಎಚ್ಚರಿಸಿದನು,

> ಯಾವನಾದರೂ ಬೇರೆ ವಿಧವಾದ ಉಪದೇಶವನ್ನು ಮಾಡಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಸ್ವಸ್ಥವಾದ ಮಾತುಗಳಿಗೂ ಭಕ್ತ್ಯನುಸಾರವಾದ ಉಪದೇಶಕ್ಕೂ ಸಮ್ಮತಿಸದೆ ಹೋದರೆಅವನು ಒಂದನ್ನೂ ತಿಳಿಯದೆ ಕುತರ್ಕ ವಾಗ್ವಾದಗಳನ್ನು ಮಾಡುವ ಭ್ರಾಂತಿಯಲ್ಲಿದ್ದು ಮದದಿಂದ ಕಣ್ಣುಗಾಣ ದವನಾಗಿದ್ದಾನೆ. ಇವುಗಳಿಂದ ಹೊಟ್ಟೇಕಿಚ್ಚು ಜಗಳ ದೂಷಣೆ ದುಸ್ಸಂಶಯ ಇವುಗಳು ಉಂಟಾಗುತ್ತವೆ (1 ತಿಮೊಥೆ 6:3, 4).

ತಿಮೊಥಿಗೆ ಅವನು ನೀಡಿದ ಅಂತಿಮ ಎಚ್ಚರಿಕೆಯಲ್ಲಿ, ಅವನು ಬರೆದನು,

> ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಬರುವ ಕ್ರಿಸ್ತ ಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯೂ ಆಣೆಯಿಟ್ಟುನಾನು ನಿನಗೆ ಖಂಡಿತವಾಗಿ ಹೇಳುವದೇನಂದರೆ - ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು. ಯಾಕಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾ ಕಥೆಗಳನ್ನು ಕೇಳುವದಕ್ಕೆ ಹೋಗುವರು (2 ತಿಮೊಥೆ 4:1-4).

ಪೌಲನು ತನ್ನ ಬೋಧನೆಯಲ್ಲಿ ಸಂಪೂರ್ಣತೆಯನ್ನು ನಿರಂತರತ್ವವನ್ನು ಬಯಸಿದನು. ಆದುದರಿಂದ ಗಲಾತ್ಯದವರು ವ್ಯತಿರಿಕ್ತ ಬೋಧನೆಗಳ ಕಡೆಗೆ ತಿರುಗಿಕೊಂಡಾಗ, ಅವನು ಎಚ್ಚರಿಸಿದನು:

> ಕ್ರಿಸ್ತನ ಕೃಪೆಯಿಂದ ನಿಮ್ಮನ್ನು ಕರೆದಾತನನ್ನು ನೀವು ಇಷ್ಟು ಬೇಗನೆ ಬಿಟ್ಟುಬೇರೆ ಸುವಾರ್ತೆಯನ್ನು ಹಿಡಿದಿರುವದಕ್ಕೆ ಆಶ್ಚರ್ಯಪಡುತ್ತೇನೆ. ಅದು ಸುವಾರ್ತೆಯೇ ಅಲ್ಲ, ಆದರೆ ಕೆಲವರು ನಿಮ್ಮಲ್ಲಿ ಭೇದವನ್ನು ಹುಟ್ಟಿಸುತ್ತಾ ಕ್ರಿಸ್ತನ ಸುವಾರ್ತೆಯನ್ನು ಮಾರ್ಪಡಿಸುವದಕ್ಕೆ ಅಪೇಕ್ಷಿಸುತ್ತಾ ಇದ್ದಾರೆ. ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು ನಾವೇ ಆಗಲಿ ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ ಶಾಪಗ್ರಸ್ತನಾಗಲಿ. ನೀವು ಸ್ವೀಕರಿಸಿದ ಸುವಾರ್ತೆಗೆ ವಿರುದ್ಧವಾದದ್ದನ್ನು ಯಾವನಾದರೂ ನಿಮಗೆ ಸಾರಿದದರೆ ಅವನು ಶಾಪಗ್ರಸ್ತನಾಗಲಿ ಎಂದು ನಾವು ಮೊದಲು ಹೇಳಿದ್ದಂತೆಯೇ ಈಗಲೂ ನಾನು ತಿರಿಗಿ ಹೇಳುತ್ತೇನೆ (ಗಲಾತ್ಯ 1:6-9).

## ಅಂತಿಮ ಸಂದೇಶ

ಮಾನವ ಬರಹಗಾರರು ನಂಬಿದ ಬೋಧನೆಗಳು ಹೊಸ ಒಡಂಬಡಿಕೆಯಲ್ಲಿದ್ದು ಅವುಗಳ ಮೂಲ, ದೇವರೇ ಎಂದು ಸ್ಥಾಪಿಸಲಾಗಿದೆ. ದೇವರು ಅವರ ಬೋಧನೆಗಳ ಜೊತೆಯಲ್ಲಿ ಮಾಡಿದ ಮಹತ್ಕಾರ್ಯಗಳೇ ಅದಕ್ಕೆ ಸಾಕ್ಷಿಯಾಗಿದೆ. ಅದು ದೇವರಿಂದಲೇ ದೃಢಪಟ್ಟಿದೆ. ಅವರಿಗೆ ಅಗತ್ಯವಿರುವ, ಜೀವಿತಕ್ಕೆ ಅನುಕೂಲವಾಗುವ ಸಕಲ ಕಾರ್ಯಗಳನ್ನು ದೇವರು ಕ್ರಿ.ಶ. ಮೊದಲನೆಯ ಶತಮಾನದಲ್ಲಿಯೇ ನೀಡಿದ್ದನು ಎಂದು ಅವರು ತಮ್ಮ ಬರಹದಲ್ಲಿ ದೃಢೀಕರಿಸಿದರು. ಆತನನ್ನು ಹಿಂಬಾಲಿಸುವವರು ಆತನ ಉಪದೇಶಕ್ಕೂ ಪ್ರಕಟನೆಗೂ ನಂಬಿಗಸ್ತರಾಗಿರಬೇಕು, ಮತ್ತು ಹೊಸ ಒಡಂಬಡಿಕೆಯ ಬೋಧನೆಗೂ, ಮತ್ತು ದೇವರ ಅಂತಿಮವಾದ ಪ್ರಕಟನೆಗೂ ನಂಬಿಗಸ್ತರಾಗಿರಬೇಕು.

ಯಾವುದೇ ನವೀನ ಮಾದರಿಯ ಪ್ರಕಟನೆಗಳನ್ನು ಈ ವಾಕ್ಯದ ಬೆಳಕಿನಲ್ಲಿ ಪರಿಶೀಲಿಸಬೇಕು. ನಾವು ಪರಿಶೀಲಿಸುವದಕ್ಕಿಂತ ಮೊದಲು, ಸತ್ಯದ ಮೂಲ ಸದ್ಗುಣಗಳನ್ನು ಅರಿಯಬೇಕು. ಸಮಾನಾಂತರವಾದ ಎರಡು ಸತ್ಯಗಳು ಒಂದೇ ಸಮಯದಲ್ಲಿ ಸಮಾನವಾಗಿರುವದಿಲ್ಲ. ಅವೆರಡೂ ಸತ್ಯವಾಗಿರಲೂ ಸಾಧ್ಯ, ಸುಳ್ಳಾಗಿರಲೂ ಸಾಧ್ಯ. ಈ ಕೆಳಗಿನ ಲೆಕ್ಕಚಾರವನ್ನು ಗಮನಿಸಿ "2+2=3"; "2+2=5." "3" ಮತ್ತು "5" ವ್ಯತಿರಿಕ್ತವಾದ ಉತ್ತರವಾಗಿರುವದರಿಂದ, ಅವೆರಡೂ ಸತ್ಯವಲ್ಲ. ಈ ಲೆಕ್ಕದಲ್ಲಿ ಎರಡೂ ತಪ್ಪಾಗಿರುತ್ತದೆ; "2+2=4" ಇದು ಬಹುಶಃ ಲೆಕ್ಕಾಚಾರದ ಉತ್ತರವಾಗಿದೆ.

ಇನ್ನೊಂದು ಉದಾಹರಣೆಯನ್ನು ಗಮನಿಸೋಣ. ಒಬ್ಬನು "ಮಳೆ ಬರುತ್ತಿದೆ" ಎಂದರೆ ಮಳೆ ಬರುತ್ತಿರಬಹುದು ಅಥವಾ ಬಾರದೆ ಇರಬಹದು, ಆದರೆ ಆಕಾಶವನ್ನು ನೋಡಿದಿರಿ ಅದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲಿ ಒಂದೇ ಸಮಯದಲ್ಲಿ ಮಳೆ ಬರುತ್ತಿದೆ ಅಥವಾ ಬರುತ್ತಿರುವದಿಲ್ಲ ಎಂಬುದಾಗಿ ಇರುವದಿಲ್ಲ. ಚಿಕ್ಕ ಮಗುವು ಸಹ ಮಳೆ ಬರುತ್ತಿದೆಯೋ ಅಥವಾ ಇಲ್ಲವೋ ಎಂದು ಗುರಿತಿಸಬಲ್ಲದು ಆದರೆ ಅದನ್ನು ಸರಿಯಾದ ರೀತಿಯಲ್ಲಿ ನಿರ್ಧರಿಸದೆ ಇರುವುದರಲ್ಲಿ ಯಾವ ಅರ್ಥವಿರುವದಿಲ್ಲ.[5]

ನವೀನ ಮಾದರಿಯ ಪ್ರಕಟನೆಗಳು ಎಂದು ಕರೆಸಿಕೊಳ್ಳುವ ವಿಷಯವು ಹೊಸ ಒಡಂಬಡಿಕೆಯ ಸತ್ಯಗಳಿಗೆ ವ್ಯತಿರಿಕ್ತವಾಗಿ ಇರುವದರಿಂದ, ಅದನ್ನು ಅರ್ಥಮಾಡಿಕೊಳ್ಳಲು, ನಾವು ಸತ್ಯಗಳ ನಿಯಮಗಳನ್ನು ಪ್ರಥಮವಾಗಿ ಅರಿಯಬೇಕು. ಯೇಸುವೇ ಸತ್ಯವಾಗಿದ್ದಾನೆ (ಯೋಹಾನ 14:6). ಆತನು ಸತ್ಯವನ್ನು ಬೋಧಿಸಿದನು (ಯೋಹಾನ 8:32), ಮತ್ತು ಸತ್ಯದಿಂದ ನಮ್ಮನ್ನು ಶುದ್ಧಪಡಿಸುತ್ತಾನೆ (ಯೋಹಾನ 17:17). ಹೊಸ ಒಡಂಬಡಿಕೆಯು ಆತನ ಉಪದೇಶವಾಗಿರುವದರಿಂದ, ಅದು ಸತ್ಯವನ್ನೆ ಉಪದೇಶಿಸುತ್ತದೆ (ಗಲಾತ್ಯ 4:16; ಎಫೆಸ 1:13; 4:15; 5:9; ಕೊಲೊಸ್ಸೆ 1:5, 6). ದೇವರು ನಮ್ಮನ್ನು ಗೊಂದಲಪಡಿಸುವದಿಲ್ಲ (1 ಕೊರಿಂಥ 14:33), ಆದರೆ ನಾವು ಸತ್ಯವನ್ನರಿತು, ರಕ್ಷಣೆ ಹೊಂದಬಕೆಂದು ಬಯಸುತ್ತಾನೆ (2 ಥೆಸಲೋನಿಕ 2:10; 1 ತಿಮೋಥೆ 2:4), ಯಾರಾದರು ಹೊಸ ಒಡಂಬಡಿಕೆಗೆ ವ್ಯತಿರಿಕ್ತವಾದ ವ್ಯಾಖ್ಯಾನವನ್ನು ಮಾಡಿದರೆ - ಒಂದು ವೇಳೆ ದೇವರಿಂದಲೇ ಬಂದ ಪ್ರಕಟಣೆ ಎಂದು ತಿಳಿಸಿದರೂ - ಅವನು ಸತ್ಯವನ್ನು ಹೇಳುತ್ತಿಲ್ಲ ಎಂದು ತಿಳಿಯಬೇಕು, ಅವನು ಹೊಸ ಒಡಂಬಡಿಕೆಗೆ ವ್ಯತಿರಿಕ್ತವಾಗಿರುವನು, ಯಾಕೆಂದರೆ ಅಂತಿಮವಾದ ಅಧಿಕಾರವು "ಒಂದೇ ಸಾರಿ ಒಪ್ಪಿಸಲ್ಪಟ್ಟಿದೆ" (ಯೂದ 3).

ಈ ವಿಧವಾಗಿ, ನಾವು "ನವೀನ" ಮಾದರಿಯ ಪ್ರಕಟಣೆಗಳನ್ನು ಅರ್ಥ ಮಾಡಿಕೊಳ್ಳಬಹುದು ಈ ವಿಧವಾಗಿ ಉದ್ಭವಿಸಿದ ಪ್ರಕಟಣೆಗಳು ಹೊಸ ಒಡಂಬಡಿಕೆಯ ಉಪದೇಶಕ್ಕೆ ಅನುಗುಣವಾಗಿದೆಯೇ ಎಂದು ಪ್ರಶ್ನಿಸಿಕೊಳ್ಳಬೇಕು. ಅದಕ್ಕೆ ಉತ್ತರ ಇಲ್ಲ ಎಂಬುದಾಗಿದ್ದರೆ, ನೀವು ಅವರಿಗೆ, ಅವರು ಹೊಂದಿದ ಹೊಸ ಪ್ರಕಟನೆಗಳ ಕುರಿತು ವಿವರಿಸಲು ಕೇಳಬೇಕು ಮತ್ತು ಹೇಗೆ ದೇವರ ಸ್ವಭಾವ ಅಥವಾ ವಾಗ್ದಾನಗಳು ಬದಲಾಯಿತು

ಎಂದು ಪ್ರಶ್ನಿಸಬೇಕು. ಯಾಕಂದರೆ ಬೈಬಲ್ ದೇವರ, ಕಡೆಯು ಪ್ರಕಟಣೆಯನ್ನು ವ್ಯಾಖ್ಯಾನಿಸುತ್ತಿರುವದರಿಂದ, ದೇವರೇ ಬದಲಾಗದೆ ಇರುವಾಗ (ಇಬ್ರಿಯ 13:8ನ್ನು ನೋಡಿರಿ), ಹೊಸ ಒಡಂಬಡಿಕೆಗೆ ತದ್ವಿರುದ್ಧವಾದ ಉಪದೇಶವು ಖಂಡಿತವಾಗಿಯು ತಪ್ಪು ಬೋಧನೆಯಾಗಿರುತ್ತದೆ. ಒಂದು ವೇಳೆ ಈ ಹೊಸ ಪ್ರಕಟಣೆಯು, ಹೊಸ ಒಡಂಬಡಿಕೆಯನ್ನು ವಿರೋಧ ಮಾಡದೆ ಹೋದರೆ? ಅದು ನಿಜವಾದ ಪ್ರಕಟನೆಯೇ, ಹೌದು, ಅಲ್ಲವೋ ಎಂದು ತಿಳಿಯಬೇಕು. ಅದರಲ್ಲಿ ವ್ಯತ್ಯಾಸವಿದ್ದರೆ, ಅದು ಅನಗತ್ಯ, ನಮಗೆ ಅಗತ್ಯವಿರುವುದು ಬೈಬಲ್ ಮಾತ್ರ.

## ಮುಕ್ತಾಯ

ನಮ್ಮ ಆರಾಧನೆಯಲ್ಲಿ, ದೇವರು ನಮ್ಮಿಂದ ಬಯಸುವ ಕಾರ್ಯವೇನು ಎಂದು ತಿಳಿದಿದ್ದೇವೆ - ಅಥವಾ ನಮ್ಮ ಜೀವಿತದ ಇತರೆ ಕ್ಷೇತ್ರಗಳಲ್ಲಿಯೂ ಇರಬಹುದು. ಅದನ್ನು ದೇವರು ಮಾತ್ರ ಪ್ರಕಟಿಸಿರಬೇಕು (ಧರ್ಮೋಪದೇಶಕಾಂಡ 29:29ನೋಡಿರಿ). ಆತನು ಒಡೆಯನು ಮತ್ತು ಕ್ರಿಸ್ತನೂ ಆಗಿರುವದರಿಂದ ಸಭೆಯಲ್ಲಿ ನಡೆಯುವ ಉಪದೇಶ ವನ್ನು ಮತ್ತು ಇತರೆ ಕಾರ್ಯಗಳನ್ನು ಅರಿಯಲು ಯೇಸುವಿಗೆ ಸರ್ವಾಧಿಕಾರವನ್ನು ನೀಡಲಾಗಿದೆ, ಮತ್ತು ಆತನು ಆಯ್ಕೆ ಮಾಡಿದ ಜನರಿಗೆ ತನ್ನ ಅಧಿಕಾರವನ್ನು ಹಸ್ತಾಂತರ ಮಾಡಿರುವನು, ಅವರ ಮೇಲೆ ಪರಿಶುದ್ಧಾತ್ಮನನ್ನು ಕಳುಹಿಸುವುದರ ಮೂಲಕ, ಅವರ ಸಂದೇಶಗಳು ದೇವರಿಂದ ಅನುಮೋಧನೆಯಾದವುಗಳು ಎಂದು ತಿಳಿಸಿದ್ದಾನೆ. ಆ ಬೋಧನೆಗಳು ಬರಹಗಳನ್ನಾಗಿ ಮಾಡಿ, ಅದನ್ನು ಹೊಸ ಒಡಂಬಡಿಕೆ ಎಂದು ಕರೆದಿದ್ದಾನೆ. ಪಾಪದ ಮತ್ತು ರಕ್ಷಣೆಯ ಕುರಿತ ಕೊನೆಯ ಪದವನ್ನು ಗ್ರಂಥಗಳಲ್ಲಿ ಬರೆಯಲಾಗಿದೆ, ನಾವು ಆತನ ಮೇಲೆ ಭರವಸವಿಟ್ಟು, ಆ ಬೋಧನೆಗಳನ್ನು ಅನುಸರಿಸಬೇಕು.

ಆತನ ವಾಕ್ಯದ ಉಪದೇಶಕ್ಕೆ ಮತ್ತು ಸತ್ಯವನ್ನು ಅರಿಯಲು, ಇತರೆ ಉಪದೇಶಗಳಾಗಲಿ ಅಥವಾ ಉಪದೇಶಕರ ಅಗತ್ಯವಿರುವದಿಲ್ಲ. ಕ್ರಿಸ್ತನು ಮೋಶೆಗಿಂತ ದೊಡ್ಡವನಾಗಿದ್ದು, ಮೋಶೆಯ ನಿಯಮಗಳ ಬದಲಾಗಿ, ಹೊಸ ಒಡಂಬಡಿಕೆಯನ್ನು ನೀಡಿರುವನು. ಆತನ ಬೋಧನೆಗಳು ಹೊಸ ಒಡಂಬಡಿಕೆಯ ಕಾಲದಲ್ಲಿ ಪರಿಪೂರ್ಣಗೊಂಡಿದ್ದು, ಇದರ ಬದಲಾಗಿ ಬೇರೆ ಯಾವ ಸಿದ್ಧಾಂತದ ಅಗತ್ಯತೆ ಇರುವದಿಲ್ಲ. ಜೀವವಾಕ್ಯಕ್ಕೂ ಮತ್ತು ರಕ್ಷಣೆಗೂ ನಾವು ಆತನನ್ನೆ ಅವಲಂಭಿಸಬೇಕು.

ನಂಬಿಕೆಯ ಮತ್ತು ಕ್ರಿಯೆಯ ಪ್ರಶ್ನೆಗಳಿಗೆ, ನಮ್ಮ ಹೃದಯಗಳನ್ನು ಸಾಮಾನ್ಯವಾದ ಅಧಿಕಾರದಿಂದ ಸ್ಥಿರ ಪಡಿಸಿಕೊಳ್ಳಬೇಕು. ಯಾಕೆಂದರೆ ಅವರು ದೇವರ ವಾಕ್ಯವನ್ನು ಆಗಾಗ್ಗೆ ಅಭ್ಯಾಸಿಸದೆ ಇರುವದರಿಂದ, ಕ್ರೈಸ್ತ ಉಪದೇಶಕರು ತಾವು ಅರಿಯದ ಭಕ್ತಿಯನ್ನು ಇತರರಿಗೆ ಹಸ್ತಾಂತರಿಸುವವರಾಗಿದ್ದಾರೆ. ಅವರನ್ನು ಕೇಳುವಂಥ ಜನರು ಉತ್ತರವಿಲ್ಲದ ಮತ್ತು ಮಾಹಿತಿ ಇಲ್ಲದ ನಿರ್ಧಾರವನ್ನು ಮಾಡುವವರಾಗಿದ್ದಾರೆ.

ನಾವು ನಂಬಿಕೆಯಿಂದ ನಡೆಯಬೇಕು, ಅದು ಮಾಹಿತಿ ಪಡೆದ ನಂಬಿಕೆಯಾಗಿರಬೇಕು, ಅದು ಸರಿಯಾದ ಬುನಾದಿಯ ಮೇಲೆ ಅವಲಂಭಿಸಿರಬೇಕು. “ಅಪೊಸ್ತಲರ ಮತ್ತು ಪ್ರವಾದಿಗಳ ಉಪದೇಶವೇ ಬುನಾದಿ ಎಂದು ಪೌಲನು ತಿಳಿಸಿರುವನು (ಅದರ ಜೊತೆಯಲ್ಲಿ) ಯೇಸು ಕ್ರಿಸ್ತನೇ ಮೂಲೆಗಲ್ಲಾಗಿದ್ದಾನೆ.” ಈ ಬುನಾದಿಯ ಮೇಲೆ, ಸಭೆ ಮತ್ತು ಅದರ ನಂಬಿಕೆ ಕಟ್ಟಲ್ಪಡಬೇಕು (ಎಫೆಸ 2:20-22). ನಂಬಿಕೆಯಲ್ಲಿ ನಾವು ನಡೆಯಬೇಕು ಎಂದು ತಿಳಿದ ನಂತರ, ಮುಖ್ಯವಾಗಿ ನಂಬಿಕೆಯಿಂದ ಆರಾಧಿಸುವ ಕುರಿತು, ಈ ಪ್ರಾಮುಖ್ಯವಾದ ಬುನಾದಿಯ ಕುರಿತು ಅಲಕ್ಷ್ಯ ಮಾಡದೆ ಇರೋಣ.

ಟಿಪ್ಪಣಿಗಳು

[1]ಹೊಸ ಒಡಂಬಡಿಕೆಗೆ ಸಹಾಯವಾಗುವಂತೆ ಉಪಯೋಗಿಸಿರುವ ವಾಕ್ಯ ಭಾಗವನ್ನು ಕೆಲವರು ಒಪ್ಪುವದಿಲ್ಲ, ಪೌಲನು ಹೊಸ ಒಡಂಬಡಿಕೆಯ ಕುರಿತು ಮಾತ್ರ ತಿಳಿಸುತ್ತಿರುವದಿಲ್ಲ, ಅದು ತಿಮೋಥಿಯು ಯೌವನಸ್ತನಾಗಿರುವಾಗ ಬರೆಯಲ್ಪಟ್ಟಿಲ್ಲ, ಪೌಲನು 2 ತಿಮೋಥಿಗೆ ಬರೆಯುವಾಗ ಅದು ಪೂರ್ಣವಾಗಿರಲಿಲ್ಲ. ಆದರೂ ಪೌಲನ ಹೇಳಿಕೆಯು ದೈವಿಕ ಮೂಲವನ್ನು ಹೊಂದಿತ್ತು ಹೊಸ ಒಡಂಬಡಿಕೆಯು ಇದನ್ನು ಬೋಧಿಸಿ, ಯೇಸುವಿನ ಬೋಧನೆಯು, ದೇವರು ಮಾನವನಾದನೆಂದು, ಆತನ ಮುಖ್ಯ ಅನುಯಾಯಿಗಳಿಗೆ ನೀಡಲಾಗಿದೆ. ಈ ಅನುಯಾಯಿಗ ಳನ್ನು ಅದನ್ನು ಇತರರಿಗೆ ಬಾಯಿ ಮಾತಿನಿಂದಲೂ, ಬರಹದ ಮೂಲಕವಾಗಿಯೂ ನೀಡಿದರು. ನಾವು ಅವರ ಬರವಣಿಗೆಗಳನ್ನು ಓದು ವಾಗ, ದೇವರ ಉಪದೇಶವನ್ನೇ ಕೇಳುತ್ತೇವೆ. ಈ ಕಾರಣದಿಂದ, ಸಕಲ ಸತ್ಕಾರ್ಯಕ್ಕೆ ಗ್ರಂಥಗಳು ನಮ್ಮನ್ನು ಸಿದ್ಧಪಡಿಸುತ್ತದೆ. [2]ಹೊಸ ಒಡಂಬಡಿಕೆಯಲ್ಲಿ ಮೂರು ಗ್ರೀಕ್ ಪದಗಳನ್ನು ಉಪಯೋಗಿಸಲಾಗಿದೆ ASV (1901) "ಮಹತ್ಕಾರ್ಯಗಳಿಗೆ," "ಸಂಕೇತ" (ಸೆಮಿಯಾನ್) "ಅದ್ಭುತಗಳು" (ತೇರಾಸ್) ಹೊಸ ಒಡಂಬಡಿಕೆಯಲ್ಲಿ ಬಹುಪದದಲ್ಲಿರುತ್ತದೆ, ಮತ್ತು "ಶಕ್ತಿ" (ಡುನಾಮಿಸ್) (ಯೋಹಾನನು "ಕೆಲಸ" ಎಂದು ಉಪಯೋಗಿಸಿರುವನು) (ಎರ್ಗನ್) ಮೆಕ್ ಡೋವೆಲ್ ಮತ್ತು ಬಿಲ್ ವಿಲ್ಸನ್‌ರವರು "ಬೈಬಲ್ ಇದನ್ನು ಸರಳವಾಗಿ 'ಕೆಲಸದ ಶಕ್ತಿ' ಮತ್ತು 'ಹೊಂದಿಸಿದ ಸಂಕೇತ' ತತ್ವವನ್ನು ತೆಗೆದುಹಾಕಿ, ಚರಿತ್ರೆ ಸಾಕ್ಷಿಗೆ ಕರೆದೊಯ್ಯುತ್ತದೆ ಎಂದ ತಿಳಿಸಿರುವರು." "ಮಹತ್ಕಾರ್ಯ" ಎಂದರೆ ಅಸಾಧಾರಣವಾದ ಗುರುತರ ಕಾರ್ಯ (Josh McDowell and Bill Wilson, *He Walked Among Us: Evidence for the Historical Jesus* [San Bernadino, Calif.: Here's Life Publishers, 1988], 263-64). [3]ಚರಿತ್ರೆಯ ಸಾಕ್ಷಿಯಲ್ಲಿ ಇದು ದೈವೀಕ ಮೂಲ ಎಂದರೆ, ಅದನ್ನು ಹಾಗೆಯೇ ಅಂಗೀಕರಸಬೇಕು. "ಅದ್ಭುತಗಳು ಇಂದ್ರೀಯ ಸಂಬಂಧವಾದವುಗಳಾದರೆ ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಬಹುದು. ಅತಹವುಗಳು ಬಾಯಿಮಾತಿನ ಸಾಕ್ಷಿಗಿಂತ ಆಧಾರವುಳ್ಳದ್ದಾಗುವುದು. ಪ್ರಪಂಚದಲ್ಲಿರುವ ಅನೇಕ ನ್ಯಾಯಸ್ಥಾನಗಳಲ್ಲಿ ಬಳಕೆಯಲ್ಲಿರುವ ನ್ಯಾಯ ಪದ್ಧತಿಯಂತೆ, ಮತ್ತು ವೈಜ್ಞಾನಿಕ ಇತಿಹಾಸ ರಚನೆಯಲ್ಲಿ ಬರಹದಿಂದಲೂ ಮತ್ತು ಬಾಯಿ ಮಾತಿನ ಸಾಕ್ಷಿಯ ಆಧಾರದ ಮೇಲೆ ತೀರ್ಪು ನೀಡುವರು. ಸಾಕ್ಷಿಯ ಪ್ರಾಮಾಣಿಕತೆಯ ಮೇಲೆ ನ್ಯಾಯಾಲಯಗಳು ಸಾಕ್ಷಿ ನೋಡಿದ್ದನ್ನು ನ್ಯಾಯಲಯವು ನೋಡಿದ್ದಂತೆ ಹೇಳಲು ಆಧಾರಗಳ ಉದ್ದೇಶವಾಗಿದೆ. ಅಪರಾದವನ್ನು ನೋಡಿರುವವನ ಸಾಕ್ಷಿಯಿಂದ ತಕರಾರನ್ನು ಪರಿಗಣಿಸಲಾಗುತ್ತದೆ. ಅಲ್ಲಿ ಕಾರಣಗಳಿಲ್ಲದಿದ್ದರೆ, ಒಂದು ಸಾರಿ ಮೂಲ ದಾಖಲೆಗಳ ಪ್ರಕಾರ ನಮೂದು ಮಾಡಿದ್ದರೆ, ಅದನ್ನು ಯಾವುದೇ ಸಮಯವು ಬದಲು ಮಾಡಲಾಗದು. ಲಾಜರನ ಪುನರುತ್ಥಾನವನ್ನು ಸಾಕ್ಷಿಕರಿಸಿದ ಯೋಹಾನನು ಅದನ್ನು ದಾಖಲು ಮಾಡಿದನು ಅದು ನಂಬಲರ್ಹವಾಗಿತ್ತು. ಇದೇ ಸಾಕ್ಷಿಯ ಉದ್ದೇಶವಾಗಿತ್ತು ಅದು ಕುದ್ದಾಗಿ ಅವರೇ ಅಲ್ಲಿದ್ದು ನೋಡಿದ್ದಂತೆ ಹೇಳುವ ಉದ್ದೇಶವಾಗಿತ್ತು (Bernard L. Ramm, *Protestant Christian Evidences: A Textbook of the Evidences of the Truthfulness of the Christian Faith for Conservative Protestants* [Chicago: Moody Press 1953], 140-41.) [4]"ಹಸ್ತಾಂತರಿಸು" ಎಂಬುದರ ಗ್ರೀಕ್ ಪದ "*paradidomi*" ಅದರ ಅರ್ಥ "ವರ್ಗಾಯಿಸುವುದು, ಮತ್ತೊಬ್ಬರಿಗೆ ಬಟವಾಡ ಮಾಡುವುದು, ನಿಕ್ಷೇಪಿಸುವುದು" (Walter Bauer, *A Greek-Lexicon of the New Testament and Other Early Christian Literature,* 3ded., rev. and ed. Frederick William Danker [Chicago: University Press, 2000], 761). ಅದೇ ಗ್ರೀಕು ಪದವನ್ನು "ಪಾರಂಪರ್ಯವೆಂದು" ಹೊಸ ಒಡಂಬಡಿಕೆಯಲ್ಲಿ ನಾನಾ ರೀತಿಯಲ್ಲಿ ಕ್ರಿಸ್ತನ ಉಪದೇಶವನ್ನು ಒಪ್ಪಿಸಿಕೊಡಲು ಉಪಯೋಗಿಸಲಾಗಿದೆ. (ನೋಡಿರಿ ಲೂಕ 1:2; 1 ಕೊರಿಂಥ 11:2, 23; 15:3; 2 ಥೆಸ್ಸಲೊನೀಕ 2:15; 3:6.) [5]ಈ ದಿನಗಳಲ್ಲಿ ಅನೇಕರು ಸತ್ಯದ ಕುರಿತಾದ ಮೂಲ ಬೋಧನೆಯನ್ನು ತಿಳಿದಿರುವದಿಲ್ಲ. ಸತ್ಯವನ್ನು ಹುಡುಕುವುದರಲ್ಲಿ ಯತ್ನಿಸುವ ಎಲ್ಲಾ ಯೋಚನೆಗಳಲ್ಲಿ ಒಪ್ಪಂದಕ್ಕೆ ಬರಬೇಕು. (ಮಳೆಯ ಕುರಿತಾಗಿ ಎರಡೂ ಕಡೆಯವರು ಒಂದು ಸಮ್ಮತಕ್ಕೆ ಬರಬೇಕು.) "ನಿಜ" ಎಂಬುದು "ಸತ್ಯ" ಎಂಬುದಾಗಿ ಬದಲಾಗುತ್ತಿದೆ. ಕೆಲವು ಸಮಯ ಮಳೆ, ಕೆಲವು ಸಮಯ ಸೂರ್ಯನ ಬೆಳಕು ಎಂಬುದಾಗಿ ಇವೆರಡು ಒಂದೇ ಸಮಯದಲ್ಲಿ, ಸ್ಥಳದಲ್ಲಿ ಉಂಟಾಗುವದಿಲ್ಲ. ಎಲ್ಲಾ ತಿಳುವಳಿಕೆಯೂ, ಮಳೆ ಬಂದು ಹೋಗುವ ರೀತಿಯಲ್ಲಿರುವದಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ನಮಗೆ ಏನೇ ಆಲೋಚಿಸಿದರೂ "2+2" *ಯಾವಾಗಲೂ* "4" ಎಂಬುದು ಸರಿಯಾದ ಉತ್ತರವಾಗಿದೆ. ಹೊಸ ಒಡಂಬಡಿಕೆಯಲ್ಲಿರುವ ಯೇಸುವಿನ ಬೋಧನೆಯು ಮಳೆಯಂತಿರದೆ 2+2=4 ಎಂಬುದಾಗಿರುವ ಸತ್ಯದಂತಿರುತ್ತದೆ (ಯೋಹಾನ 8:32).